ದಿನಾಂಕ : 04.04.2022 ಮಿಸ್ ನಂ.13/2017 ರಲ್ಲಿ
ಪಿ.ಡಬ್ಲ್ಯೂ-1(ಗೌತಮ್ ಸಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದಃ

ನನ್ನ ತಾತನವರು ತೀರಿಕೊಂಡ ನಂತರ ಅದೇ ಕಸುಬನ್ನು ನನ್ನ ಚಿಕ್ಕಪ್ಪನವರು ಮುಂದುವರೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆಯವರು ಯಾವತ್ತು ಕೃಷಿ ಕೆಲಸ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಕೃಷಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿಗೆ ನಿಮ್ಮ ಚಿಕ್ಕಪ್ಪನ ವರು ಅವಿದ್ಯಾವಂತರಾಗಿದ್ದುದ್ದರಿಂದ ತಂದೆ ಮಾಡಿತ್ತಿದ್ದ ಕಸುಬನ್ನೇ ಮುಂದುವರೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿ ಎಂದು ನುಡಿದು ಮುಂದುವರೆದು ನನ್ನ ಚಿಕ್ಕಪ್ಪ 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ದಿನಾಂಕಃ 21.08.1997 ರಲ್ಲಿ ಮುಂದುವರೆದ ವಿದ್ಯಾಭ್ಯಾಸಕ್ಕಾಗಿ ಹೊರ ದೇಶಕ್ಕೆ ಹೋಗಿರುತ್ತೇನೆ. ನಾನು ಅಮೇರಿಕಾದ ಸಿಟಿಜನ್ ಶಿಪ್ ಅನ್ನು ಹೊಂದಿರುತ್ತೇನೆ ಎಂದರೆ ಸರಿ. ನಾನು ಭಾರತ ದೇಶದ ಮತ್ತು ಅಮೇರಿಕಾದ ಸಿಟಿಜನ್ ಶಿಪ್ ಹೊಂದಿದ ವ್ಯಕ್ತಿಯಾಗಿದ್ದೇನೆ ಎಂದರೆ ಸರಿ. ನನ್ನ ತಂದೆಯನ್ನು ಕರೆದುಕೊಂಡು ಬಂದು ಸಾಕ್ಷಿಮಾಡಿಸಲು ನನಗೆ ಸಾಧ್ಯವಿರುವುದಿಲ್ಲ.

ದಿನಾಂಕ : 04.04.2022 ಮಿಸ್ ನಂ.13/2017 ರಲ್ಲಿ
ಪಿ.ಡಬ್ಲ್ಯೂ-1(ಗೌತಮ್ ಸಿ)

ನಾನು ಬೆಂಗಳೂರಿಗೆ ಬಂದಾಗ ನನ್ನ ತಂದೆಯ ಮನೆಯಹಲ್ಲೆ ವಾಸವಾಗಿರುತ್ತೇನೆ ಆದರೂ ಸಹ ನನ್ನ ತಂದೆಯನ್ನು ಕರೆದುಕೊಂಡು ಬಂದು ಸಾಕ್ಷಿ ನುಡಿಸಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನವರಿಗೆ ಲೋಕದ ಜ್ಞಾನ ಕಾನೂನಿನ ತಿಳುವಳಿಕೆ ಇರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅವರು ಚುನಾವಣೆಗೆ ಸ್ಪರ್ಧಿಸುತ್ತಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನವರು ದನ ಮತ್ತು ಎಮ್ಮೆಗಳನ್ನು ಮೇಯಿಸಿಕೊಂಡು ಇರುತ್ತಾರೆ ಅವರು ಯಾವುದೇ ಚುನಾವಣೆಗಳಲ್ಲಿ ಭಾಗವಹಿಸುತ್ತಿಲ್ಲ ಆದರೂ ಸಹ ನಾನು ಅವರು ಚುನಾವಣೆಯಲ್ಲಿ ಭಾಗವಹಿಸುತ್ತಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನವರಿಗೆ ಇಂಗ್ಲೀಷ್ ಭಾಷೆ ಬರುವುದಿಲ್ಲ ಎಂದರೆ ಸರಿ. ಕನ್ನಡ ಭಾಷೆಯನ್ನು ಓದಲು ಬರೆಯಲು ಬರುವುದಿಲ್ಲ ಯಾರಾದರು ಓದಿ ಹೇಳಿದರೆ ತಿಳಿಯುತ್ತದೆ ಎಂದರೆ ಸರಿಯಲ್ಲ.

ನಿಪಿ-2 ಮತ್ತು ನಿಪಿ-3 ರ ಬಗ್ಗೆ ನಮ್ಮ ಚಿಕ್ಕಪ್ಪನವರಿಗೆ ಏನು ತಿಳಿಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನವರು ಅವಿದ್ಯಾವಂತರಾಗಿರುವುದರಿಂದ ಅವರು ಕಾನೂನಿಗೆ ಹಿರಿಯರಿಗೆ ಮಾನ್ಯ ನ್ಯಾಯಾಲಯಕ್ಕೆ ಗೌರವವನ್ನು ಕೊಡುವುದು ಮಾತ್ರ ಅವರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ದಾಖಲಾತಿಗಳಿಗೆ ಸಂಬಂಧಪಟ್ಟಂತೆ ನನ್ನ ಚಿಕ್ಕಪ್ಪನವರಿಗೆ ತಿಳುವಳಿಕೆ ಇರುವುದಿಲ್ಲ ಆದರೂ ಉದ್ದೇಶ ಪೂರ್ವಕವಾಗಿ ನಿಪಿ-2 ಮತ್ತು 3 ರಂತೆ ನಾನೇ ದಾಖಲಾತಿಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ ಃ 04.04.2022

ಮಿಸ್ ನಂ.13/2017 ರಲ್ಲಿ
ಪಿ.ಡಬ್ಲ್ಯೂ-1(ಗೌತಮ್ ಸಿ)

ನನ್ನ ತಂದೆಯವರ ಜೊತೆ ಆತ್ಮ ಗೌರವದಿಂದ ನಡೆದುಕೊಂಡು ಬರುತ್ತಿರುತ್ತೇನೆ. ನನ್ನ ಅಜ್ಜಿಯವರಿಗೆ ನನ್ನ ಚಿಕ್ಕಪ್ಪನವರು ಬರವಣಿಗೆಯನ್ನು ಬರೆದು ಹಾಕಿಸಿರುವ ಬಗ್ಗೆ ಅದನ್ನು ಓದಿಸಿ ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಗೆ ನಿಮ್ಮ ಚಿಕ್ಕಪ್ಪನವರು ನಿಮ್ಮ ಅಜ್ಜಿಗೆ ಬರೆದ ಬರವಣಿಗೆಯನ್ನು ನೀವು ಓದಿ ನೋಡಿ ಚಿಂತನೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದರೆ ಸಾಕ್ಷಿಯು ನಾನು ಓದಿನೋಡಿರುತ್ತೇನೆ ನಾನು ಪುನಃ ಓದಿ ಚಿಂತಿಸುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಚಿಕ್ಕಪ್ಪನವರು ನ್ಯಾಯಾಲಯದ ಎಲ್ಲಾ ಆಜ್ಞೆ ಆದೇಶ ಎಲ್ಲವನ್ನು ಪರಿಪಾಲನೆ ಮಾಡುವುದನ್ನು ಬಿಟ್ಟು ಬೇರೆ ಅವರಿಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.